# ರಫೀಕನ ಮೊಬೈಲ್ ದುಖಾನು

■ ಕಿರಣ್ ಮಂಜುನಾಥ್
ಚಿತ್ರ: ಮೇಘಾ ಜೆ. ಶೆಟ್ಟಿ

**ತನಗೆ ಮಕ್ಕಳಾಗದ್ದಕ್ಕೆ ರಫೀಕನೇ ಕಾರಣ ಎಂದು ಕೂಜಳ್ಳಿನ ಅನಸೂಯ ತೆಗೆದ ತಗಾದೆ, ವಾಟ್ಸಾಪ್ಪಿನ ಮೂಲಕ ಹರಡಿ ಊರವರ ಮಂಡೆ ಬಿಸಿಯಾಯಿತು.**



‘ಎಲ್ಲಾ ಊರಲ್ಲೂ ಒಬ್ಬ ನಸ್ಲೆ ಹರಾಮ್ ಇರ್ತಾನಂತೆ. ನಮ್ಮೂರಲ್ಲಿ ನಂಬರ್ ಒನ್ ಹರಾಮಿ ಅಂದ್ರೆ ಈ ರಫೀಕನೇ. ದೂಸರಾ ಮಾತಿಲ್ಲ’

ತಮ್ಮ ಬಿಳಿ ಗಡ್ಡ ತೀಡಿದವರು ದಿಲ್ ದಾರ್ ಸಾಹೇಬರು. ತಮ್ಮ ಫರ್ನಿಚರ್ ಅಂಗಡಿಗೆ ಬರೋ ಹೋಗೋರಿಗೆಲ್ಲ ಈ ಮಾತು ಹೇಳದಿದ್ದರೆ ದಿಲ್ ದಾರ್ ಸಾಹೇಬರಿಗೆ ಸಮಾಧಾನ ಸಿಗ್ತಿರಲಿಲ್ಲ. ಹೇಳಿದಷ್ಟಕ್ಕೆ ಸಮಾಧಾನ ಸಿಗುತ್ತಲಿತ್ತು ಅಂತಲೂ ಅಲ್ಲ. ಒಟ್ಟಿನಲ್ಲಿ ಸಿಕ್ಕ ಸಿಕ್ಕವರ ಬಳಿ ರಫೀಕನ ಮಾನ ಹರಾಜಾಕುವುದು, ಆತನನ್ನು ತಮ್ಮ ಕುಟುಂಬದಿಂದ ಅಂತರ ಕಾಪಾಡಿಕೊಳ್ಳುವ ಸುಲಭ ಮಾರ್ಗವಾಗಿರಬಹುದು.

ಅಷ್ಟಕ್ಕೂ ರಫೀಕನೇನು ಊರಿನ ಉಳಿದ ಸಾಬರ ಹುಡುಗರಂತೆ ಜವಾಬ್ದಾರಿ ಬಿಟ್ಟು ತಿರುಗುವ ಹುಡುಗನಲ್ಲ. ಊರಿನ ಪ್ರಾಯದ ಹುಡುಗರು ಹದಿನೈದು ದಿನಕ್ಕೊಂದು ಹೇರ್‌ಸ್ಟೈಲ್ ಬದಲಾಯಿಸಿಕೊಳ್ಳುತ್ತ ಯಮಗಾತ್ರದ ಬೈಕುಗಳಲ್ಲಿ ಊರು ಸುತ್ತುತ್ತ ಸಮಯ ಬರ್ಬಾದ್ ಮಾಡುತ್ತಿದ್ದರೆ ರಫೀಕ ಈ ವಯಸ್ಸಿನಲ್ಲೇ ಅವರಪ್ಪನಂತೆ ದುಡಿಯುತ್ತಿದ್ದ. ಅಷ್ಟಿದ್ದೂ ದಿಲ್‌ದಾರ್ ಸೇರಿದಂತೆ ಊರಿನ ಹಿರೀಕರೆಲ್ಲ ರಫೀಕನನ್ನ ಜಾಡಿಸುವುದಕ್ಕೆ ಬೇರೆಯದೇ ತಾಂತ್ರಿಕ ಕಾರಣಗಳಿವೆ.

ಚಂದಾವರ ಸೀಮೆಯ ಮರ್ಯಾದಸ್ಥ ಕುಟುಂಬದಲ್ಲಿ ದಿಲ್ ದಾರ್ ಸಾಹೇಬರದ್ದೂ ಒಂದು. ರಫೀಕ ಅವರ ತಂಗಿಯ ಮಗ. ಹತ್ತನೇ ಕ್ಲಾಸು ಮುಗಿಯುತ್ತಲೇ ಮತ್ಸ್ಯಗಂಧ ಟ್ರೇನು ಹಿಡಿದು ಮುಂಬಯಿ, ಪುಣೆ, ಗೋವಾ ಅಂತೆಲ್ಲ ಅಲೆದು ಕೊನೆಗೆ ಚಂದಾವರದಲ್ಲಿ ಮೊಬೈಲ್ ಅಂಗಡಿ ಹಾಕಿ ಕುಳಿತಿದ್ದ. ಆಡು ಮುಟ್ಟದ ಸೊಪ್ಪಿಲ್ಲ, ರಫೀಕ ಮಾಡದ ಕೆಲಸವಿಲ್ಲ. ಶುಂಠಿ ವ್ಯಾಪಾರ, ಬೈಕ್ ಮೆಕಾನಿಕ್, ಕ್ಯಾಬ್ ಡ್ರೈವರ್, ಕಪ್ಪೆ ಸ್ಮಗ್ಲಿಂಗ್ ಹೀಗೆ ನಾನಾ ಅವತಾರಗಳನ್ನೆತ್ತಿ ಕೊನೆಗೆ ಪ್ರತಿಷ್ಠಾಪನೆಯಾದದ್ದು ಈ ಮೊಬೈಲ್ ದುಖಾನಿನಲ್ಲಿ.

ಅತ್ತ ಅರಬ್ಬೀ ಸಮುದ್ರವನ್ನೂ ಇತ್ತ ಸಹ್ಯಾದ್ರಿ ಪರ್ವತ ಶ್ರೇಣಿಯನ್ನೂ ಸಮಾನ ಅಂತರದಲ್ಲಿಟ್ಟುಕೊಂಡಿರುವ ಊರು ಚಂದಾವರ. ಮುಕ್ಕಾಲು ಪಾಲು ಗುಡ್ಡ ಕಾಡಿನಿಂದಾವೃತವಾದ ಈ ಸೀಮೆಯಲ್ಲಿರುವವರು ಹೆಚ್ಚಿನವರು ಬಡ ರೈತರು, ಕೂಲಿಯಾಳುಗಳು. ಇಂಥ ಕಗ್ಗಾಡಿನಲ್ಲಿ ಮೊಬೈಲ್